**ಕರ್ನಾಟಕ ವಿಧಾನ ಸಭೆ**
**ಹದಿನಾಲ್ಕನೇ ವಿಧಾನ ಸಭೆ**
**ಹದಿಮೂರನೇ ಅಧಿವೇಶನ**
**(ಮುಂದುವರೆದ ಉಪವೇಶನ)**

# ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) (ತಿದ್ದುಪಡಿ) ವಿಧೇಯಕ 2017

**(2017ರ ವಿಧಾನಸಭೆಯ ವಿಧೇಯಕ ಸಂಖ್ಯೆ-14)**

ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) ಅಧಿನಿಯಮ, 2006ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) ಅಧಿನಿಯಮ, 2006ನ್ನು (2006ರ ಕರ್ನಾಟಕ ಅಧಿನಿಯಮ 8) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೆಂಟನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) (ತಿದ್ದುಪಡಿ) ಅಧಿನಿಯಮ, ಅಧಿನಿಯಮ, 2017 ಎಂದು ಕರೆಯತಕ್ಕದ್ದು.

(2) 1 ಮತ್ತು 5 ನೇ ಪ್ರಕರಣಗಳು ಈ ಕೂಡಲೇ ಜಾರಿಗೆ ಬರತಕ್ಕದ್ದು ಮತ್ತು ಉಳಿದ ಉಪಬಂಧಗಳು ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದ ಅಂಥ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. 2ನೇ ಪ್ರಕರಣದ ತಿದ್ದುಪಡಿ.-** ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) ಅಧಿನಿಯಮ, 2006ರ (2006ರ ಕರ್ನಾಟಕ ಅಧಿನಿಯಮ 8) (ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 2ನೇ ಪ್ರಕರಣದಲ್ಲಿ,-

(ಎ) (ಎಫ್) ಖಂಡದ ತರುವಾಯ, ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:-

"ಪರಂತು, ಯಾವುದೇ ಕೋರ್ಸಿಗೆ ಭಾರತ ಸರ್ಕಾರ ಅಥವಾ ಅದರ ಏಜೆನ್ಸಿಯು ಸಾಮಾನ್ಯ ಪ್ರವೇಶ ಪರೀಕ್ಷೆಯನ್ನು ನಡೆಸುವ ಸಂದರ್ಭದಲ್ಲಿ ಅಂಥ ಕೋರ್ಸಿಗೆ ಪ್ರವೇಶವನ್ನು ಕಲ್ಪಿಸುವುದಕ್ಕಾಗಿ ಅಂಥ ಪರೀಕ್ಷೆಯಲ್ಲಿ ನಿರ್ಧರಿಸಲಾದ ಮೆರಿಟ್ ಅನ್ನು ಪರಿಗಣಿಸತಕ್ಕದ್ದು."

(ಬಿ) (ಜೆಜೆ) ಖಂಡದಲ್ಲಿ,-

(i) "ಅಲ್ಪಸಂಖ್ಯಾತೇತರ ಅಥವಾ ಅಲ್ಪಸಂಖ್ಯಾತ ಖಾಸಗಿ ಅನುದಾನಿತವಲ್ಲದ ವೃತ್ತಿ ಶಿಕ್ಷಣ ಸಂಸ್ಥೆಗಳ ಸಂಘಟನೆಯು ನಡೆಸುವ" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು; ಮತ್ತು

(ii) ಹಾಗೆ ತಿದ್ದುಪಡಿ ಮಾಡಲಾದ (ಜೆಜೆ) ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"ಪರಂತು, ಭಾರತ ಸರ್ಕಾರ ಅಥವಾ ಅದರ ಏಜೆನ್ಸಿಯು ಅಂಥ ಸಾಮಾನ್ಯ ಪ್ರವೇಶ ಪರೀಕ್ಷೆಯನ್ನು ನಡೆಸುವ ಸಂದರ್ಭದಲ್ಲಿ ನಿಯಮಿಸಬಹುದಾದ ಅಂಥ ಏಜೆನ್ಸಿಯು ಮತ್ತು ಅಂಥ ವಿಧಾನದಲ್ಲಿ ಕೇಂದ್ರಿಕೃತ ಕೌನ್ಸಿಲಿಂಗ್ ಅನ್ನು ನಡೆಸತಕ್ಕದ್ದು."

(ಸಿ) (ಎನ್) ಖಂಡದ ಕೊನೆಯಲ್ಲಿ "ಮತ್ತು ಇದು ಭಾರತೀಯ ಮೂಲದ ವ್ಯಕ್ತಿಗಳು ಮತ್ತು ಭಾರತದ ಸಾಗರೋತ್ತರ ನಾಗರಿಕರು ಇವರನ್ನು ಒಳಗೊಳ್ಳುತ್ತದೆ" ಎಂಬ ಪದಗಳನ್ನು ಸೇರಿಸತಕ್ಕದ್ದು.

(ಡಿ) (ಕ್ಯೂ) ಖಂಡದಲ್ಲಿ "ಒಂದು ವಿಶ್ವವಿದ್ಯಾನಿಲಯಕ್ಕೆ ಸಂಯೋಜಿತವಾದ" ಎಂಬ ಪದಗಳಿಗೆ "ಒಂದು ವಿಶ್ವವಿದ್ಯಾಲಯಕ್ಕೆ ಸಂಯೋಜಿತವಾದ ಹಾಗೂ ರಾಜ್ಯದ ಖಾಸಗಿ ವಿಶ್ವವಿದ್ಯಾಲಯಗಳನ್ನು ಒಳಗೊಂಡಂತೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ಇ) (ಎಸ್) ಖಂಡಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(ಎಸ್) "ಮೀಸಲಿಟ್ಟ ಸೀಟುಗಳು" ಎಂದರೆ, ಸರ್ಕಾರಿ ಕಾಲೇಜುಗಳಲ್ಲಿ, ವಿಶ್ವವಿದ್ಯಾನಿಲಯಗಳ ಘಟಕ ಕಾಲೇಜುಗಳಲ್ಲಿ, ಖಾಸಗಿ ಅನುದಾನಿತ ಮತ್ತು ಅನುದಾನಿತವಲ್ಲದ ವೃತ್ತಿ ಶಿಕ್ಷಣ ಸಂಸ್ಥೆಗಳಲ್ಲಿ, ಖಾಸಗಿ ವಿಶ್ವವಿದ್ಯಾಯಲಗಳಲ್ಲಿ, ರಾಜ್ಯ ಸರ್ಕಾರವು ಅಧಿಸೂಚಿಸಬಹುದಾದಂತೆ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳಿಗೆ ಸೇರಿದ ವ್ಯಕ್ತಿಗಳಿಗಾಗಿ ಅಥವಾ ಕರ್ನಾಟಕ ವಿದ್ಯಾರ್ಥಿಗಳಿಗಾಗಿ ಮೀಸಲಿಟ್ಟ ಸೀಟುಗಳು;"

**3. 3ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 3ನೇ ಪ್ರಕರಣದಲ್ಲಿ,-

(ಎ) (1)ನೇ ಉಪಪ್ರಕರಣದ ಪರಂತುಕದಲ್ಲಿ "ವೃತ್ತಿ ಶಿಕ್ಷಣ ಸಂಸ್ಥೆಗಳು" ಎಂಬ ಪದಗಳ ತರುವಾಯ "ಮತ್ತು ಡೀಮ್ಡ್ ವಿಶ್ವವಿದ್ಯಾಲಯಗಳು" ಎಂಬ ಪದಗಳನ್ನು ಮತ್ತು "ವೃತ್ತಿ ಶಿಕ್ಷಣ ಸಂಸ್ಥೆಗಳ" ಎಂಬ ಪದಗಳ ತರುವಾಯ "ಮತ್ತು ಡೀಮ್ಡ್ ವಿಶ್ವವಿದ್ಯಾಲಯಗಳ" ಎಂಬ ಪದಗಳನ್ನು ಸೇರಿಸತಕ್ಕದ್ದು.

(ಬಿ) (2)ನೇ ಉಪಪ್ರಕರಣದಲ್ಲಿ,-

(i) "ಸರ್ಕಾರಿ ಸೀಟುಗಳಿಗೆ" ಎಂಬ ಪದಗಳಿಗೆ "ಎಲ್ಲ ಸೀಟುಗಳಿಗೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು; ಮತ್ತು

(ii) (2)ನೇ ಉಪಪ್ರಕರಣದ ತರುವಾಯ ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:-

"ಪರಂತು, ಭಾರತ ಸರ್ಕಾರ ಅಥವಾ ಅದರ ಯಾವುದೇ ಏಜೆನ್ಸಿಯು ಯಾವುದೇ ವೃತ್ತಿಪರ ಕೋರ್ಸುಗಳ ಸಂಬಂಧದಲ್ಲಿ ಸಾಮಾನ್ಯ ಪ್ರವೇಶ ಪರೀಕ್ಷೆಯ ನಡೆಸಿದರೆ, ಆಗ ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ ಅಭ್ಯರ್ಥಿಗಳು ಪಡೆದ ಅಂಕಗಳ ಆಧಾರದ ಮೇಲೆ ಎಲ್ಲಾ ಸರ್ಕಾರಿ ಸೀಟುಗಳಿಗಾಗಿ ಅಥವಾ ಖಾಸಗಿ ಅನುದಾನಿತವಲ್ಲದ ವೃತ್ತಿ ಶಿಕ್ಷಣ ಸಂಸ್ಥೆಗಳ ಸೀಟುಗಳಿಗಾಗಿ ಮತ್ತು ಡೀಮ್ಡ್ ವಿಶ್ವವಿದ್ಯಾಲಯಗಳ ವೃತ್ತಿಪರ ಕೋರ್ಸುಗಳಿಗಾಗಿ ರಾಜ್ಯ ಸರ್ಕಾರವು ಅಧಿಸೂಚಿಸಬಹುದಾದ ಅಂಥ ಏಜೆನ್ಸಿಯು ಕೇಂದ್ರಿಕೃತ ಕೌನ್ಸಿಲಿಂಗ್ ಅನ್ನು ನಡೆಸತಕ್ಕದ್ದು."

(ಸಿ) (6)ನೇ ಉಪಪ್ರಕರಣದಲ್ಲಿ,-

(i) "ಸರ್ಕಾರಿ" ಎಂಬ ಪದವನ್ನು ಬಿಟ್ಟುಬಿಡತಕ್ಕದ್ದು; ಮತ್ತು

(ii) (6)ನೇ ಉಪಪ್ರಕರಣದ ತರುವಾಯ ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:-

"ಪರಂತು, ಭಾರತ ಸರ್ಕಾರ ಅಥವಾ ಅದರ ಯಾವುದೇ ಏಜೆನ್ಸಿಯು ಯಾವುದೇ ಕೋರ್ಸುಗಳಿಗೆ ಸಾಮಾನ್ಯ ಪ್ರವೇಶ ಪರೀಕ್ಷೆಯನ್ನು ನಡೆಸಿದರೆ, ಆಗ ರಾಜ್ಯ ಸಾಮಾನ್ಯ ಪ್ರವೇಶ ಪರೀಕ್ಷಾ ಸಮಿತಿಯು ಸಾಮಾನ್ಯ

ಪ್ರವೇಶ ಪರೀಕ್ಷೆಯನ್ನು ನಡೆಸುವ ಅಗತ್ಯವಿರುವುದಿಲ್ಲ, ಆದರೆ ಸರ್ಕಾರಿ ಅಥವಾ ಖಾಸಗಿ ಅನುದಾನಿತವಲ್ಲದ ಮತ್ತು ಡೀಮ್ಡ್ ವಿಶ್ವವಿದ್ಯಾಲಯ ಸಂಸ್ಥೆಗಳ ಎಲ್ಲಾ ವೃತ್ತಿಪರ ಕೋರ್ಸುಗಳಿಗೆ ಪ್ರವೇಶವನ್ನು ನೀಡುವುದಕ್ಕಾಗಿ ಕೇಂದ್ರಿಕೃತ ಕೌನ್ಸಿಲಿಂಗ್ ಅನ್ನು ನಿಯಮಿಸಬಹುದಾದ ಅಂಥ ಏಜೆನ್ಸಿಯ ಮೂಲಕ ಮತ್ತು ಅಂಥ ವಿಧಾನದಲ್ಲಿ ನಡೆಸತಕ್ಕದ್ದು."

**4. 4ನೇ ಪ್ರಕರಣದ ಪ್ರತಿಯೋಜನೆ.–** ಮೂಲ ಅಧಿನಿಯಮದ 4ನೇ ಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"**4. ಅನುದಾನಿತವಲ್ಲದ ವೃತ್ತಿ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ವಿಧಾನ.–** ಯಾವುದೇ ವ್ಯಾಸಂಗಕ್ರಮದಲ್ಲಿ ವೃತ್ತಿಪರ ಶಿಕ್ಷಣವನ್ನು ನೀಡುವ ಅಲ್ಪಸಂಖ್ಯಾತ ಅಥವಾ ಅಲ್ಪಸಂಖ್ಯಾತವಲ್ಲದ ಅನುದಾನಿತವಲ್ಲದ ವೃತ್ತಿ ಶಿಕ್ಷಣ ಸಂಸ್ಥೆಗಳಲ್ಲಿ ಎಲ್ಲಾ ಸೀಟುಗಳಿಗೆ ರಾಜ್ಯ ಸಾಮಾನ್ಯ ಪ್ರವೇಶ ಪರೀಕ್ಷಾ ಸಮಿತಿಯು ನಡೆಸುವ ಸಾಮಾನ್ಯ ಪ್ರವೇಶ ಪರೀಕ್ಷೆಯ ಮೂಲಕ ಪ್ರವೇಶವನ್ನು ನೀಡತಕ್ಕದ್ದು:

ಪರಂತು, ಭಾರತ ಸರ್ಕಾರ ಅಥವಾ ಅದರ ಏಜೆನ್ಸಿಯು ಯಾವುದೇ ವೃತ್ತಿಪರ ಕೋರ್ಸಿಗೆ ಸಾಮಾನ್ಯ ಪ್ರವೇಶ ಪರೀಕ್ಷೆಯನ್ನು ನಡೆಸಿದ ಸಂದರ್ಭದಲ್ಲಿ, ಆಗ ಅಂಥ ಕೋರ್ಸುಗಳ ಪ್ರವೇಶಕ್ಕಾಗಿ ಕೇಂದ್ರಿಕೃತ ಕೌನ್ಸಿಲಿಂಗ್ ಅನ್ನು ನಿಯಮಿಸಬಹುದಾದ ಅಂಥ ಏಜೆನ್ಸಿಯ ಮೂಲಕ ಮತ್ತು ಅಂಥ ವಿಧಾನದಲ್ಲಿ ನಡೆಸತಕ್ಕದ್ದು."

**5. 4ಎ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 4ಎ ಪ್ರಕರಣದ (1)ನೇ ಉಪಪ್ರಕರಣದಲ್ಲಿ,–

(i) (ಡಿ) ಖಂಡದಲ್ಲಿ,–

(ಎ) (ii)ನೇ ಉಪಖಂಡದಲ್ಲಿ, "ಶೇಕಡಾ ಅರವತ್ತಕ್ಕಿಂತ" ಎಂಬ ಪದಗಳಿಗೆ "ಶೇಕಡಾ ಐವತ್ತೈದಕ್ಕಿಂತ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು; ಮತ್ತು

(ಬಿ) (iii)ನೇ ಉಪಖಂಡದಲ್ಲಿ, "ಶೇಕಡಾ ಇಪ್ಪತ್ತಕ್ಕಿಂತ" ಎಂಬ ಪದಗಳಿಗೆ "ಶೇಕಡಾ ಇಪ್ಪತ್ತೈದಕ್ಕಿಂತ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ii) ಪರಂತುಕದ ತರುವಾಯ ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:–

"ಮತ್ತು ಪರಂತು, ಭಾರತ ಸರ್ಕಾರ ಅಥವಾ ಅದರ ಏಜೆನ್ಸಿಯು ಯಾವುದೇ ವೃತ್ತಿಪರ ಶಿಕ್ಷಣ ಕೋರ್ಸಿಗೆ ಸಾಮಾನ್ಯ ಪ್ರವೇಶ ಪರೀಕ್ಷೆಯನ್ನು ನಡೆಸಿದ ಸಂದರ್ಭದಲ್ಲಿ, ಸೀಟುಗಳ ಹಂಚಿಕೆಗಾಗಿ ಕೇಂದ್ರಿಕೃತ ಕೌನ್ಸಿಲಿಂಗ್‌ಅನ್ನು ನಿಯಮಿಸಬಹುದಾದ ಅಂಥ ಏಜೆನ್ಸಿಯು ನಡೆಸತಕ್ಕದ್ದು:

ಅಲ್ಲದೆ ಪರಂತು, ಶೇಕಡಾ ಮೂವತ್ತಕ್ಕಿಂತ ಕಡಿಮೆಯಲ್ಲದಷ್ಟು ಸಂಸ್ಥೆಗಳ ಸೀಟುಗಳನ್ನು ಕರ್ನಾಟಕದ ವಿದ್ಯಾರ್ಥಿಗಳ ಮೂಲಕ ತುಂಬತಕ್ಕದ್ದು ಮತ್ತು ಕರ್ನಾಟಕ ವಿದ್ಯಾರ್ಥಿಗಳು ಸಾಕಷ್ಟು ಸಂಖ್ಯೆಯಲ್ಲಿ ಲಭ್ಯವಿರದಿದ್ದಲ್ಲಿ ಅಂಥ ಸೀಟುಗಳನ್ನು ಇತರರ ಮೂಲಕ ತುಂಬತಕ್ಕದ್ದು."

**6. 4ಬಿ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 4ಬಿ ಪ್ರಕರಣದಲ್ಲಿ,–

(ಎ) (2)ನೇ ಉಪಪ್ರಕರಣದ ತರುವಾಯ ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:–

"ಪರಂತು, ಯಾವುದೇ ವೃತ್ತಿ ಶಿಕ್ಷಣ ಕೋರ್ಸುಗಳಿಗಾಗಿ ಭಾರತ ಸರ್ಕಾರ ಅಥವಾ ಅದರ ಏಜೆನ್ಸಿಯು ಸಾಮಾನ್ಯ ಪ್ರವೇಶ ಪರೀಕ್ಷೆಯನ್ನು ನಡೆಸಿದ ಸಂದರ್ಭದಲ್ಲಿ, ಅಂಥ ವೃತ್ತಿ ಶಿಕ್ಷಣ ಕೋರ್ಸುಗಳಿಗಾಗಿ, ಡೀಮ್ಡ್ ವಿಶ್ವವಿದ್ಯಾಲಯಗಳು ಆ ಪರೀಕ್ಷೆಯಲ್ಲಿ ಗಳಿಸಿದ ರ್‍ಯಾಂಕುಗಳ ಮೇಲೆ ಪ್ರವೇಶವನ್ನು ನೀಡತಕ್ಕದ್ದು ಆದರೆ ಅಂಥ ಡೀಮ್ಡ್ ವಿಶ್ವವಿದ್ಯಾಲಯ ಸಂಸ್ಥೆಗಳ ಪ್ರವೇಶಕ್ಕಾಗಿ ನಿಯಮಿಸಬಹುದಾದ ಅಂಥ ಏಜೆನ್ಸಿಯ ಮೂಲಕ ಮತ್ತು ಅಂಥ ವಿಧಾನದಲ್ಲಿ ಕೇಂದ್ರೀಕೃತ ಕೌನ್ಸಿಲಿಂಗ್ ಅನ್ನು ನಡೆಸತಕ್ಕದ್ದು."

(ಬಿ) (3)ನೇ ಉಪಪ್ರಕರಣದ ತರುವಾಯ, ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:–

"ಮತ್ತು ಪರಂತು, ಭಾರತ ಸರ್ಕಾರ ಅಥವಾ ಅದರ ಏಜೆನ್ಸಿಯು ವೃತ್ತಿ ಶಿಕ್ಷಣದ ಯಾವುದೇ ಸಾಮಾನ್ಯ ಪ್ರವೇಶ ಪರೀಕ್ಷೆಯನ್ನು ನಡೆಸಿದಾಗ, ಸೀಟುಗಳ ಹಂಚಿಕೆಗಾಗಿ ಕೇಂದ್ರೀಕೃತ ಕೌನ್ಸಿಲಿಂಗ್ ಅನ್ನು ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ ಪಡೆದ ಮೆರಿಟ್ ಆಧಾರದ ಮೇಲೆ ನಿಯಮಿಸಬಹುದಾದ ಅಂಥ ಏಜೆನ್ಸಿಯು ನಡೆಸತಕ್ಕದ್ದು. ಡೀಮ್ಡ್ ವಿಶ್ವವಿದ್ಯಾಲಯಗಳ ಸಂಘವನ್ನು ರಚಿಸಲು ಡೀಮ್ಡ್ ವಿಶ್ವವಿದ್ಯಾಲಯಗಳು ವಿಫಲವಾದ ಸಂದರ್ಭದಲ್ಲಿ, ನಿಯಮಿಸಬಹುದಾದ ಅಂಥ ಏಜೆನ್ಸಿಯ ಮೂಲಕ ಮತ್ತು ಅಂಥ ವಿಧಾನದಲ್ಲಿ ಕೌನ್ಸಿಲಿಂಗ್ ಅನ್ನು ನಡೆಸತಕ್ಕದ್ದು."

**7. 5ನೇ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 5ನೇ ಪ್ರಕರಣದ (7)ನೇ ಉಪಪ್ರಕರಣದಲ್ಲಿ "ಅನುಸರಿಸಬೇಕಾದ ಗುಣಮಟ್ಟವನ್ನು ಮತ್ತು ಕಾರ್ಯವಿಧಾನಗಳನ್ನು ಪ್ರವೇಶ ಮೇಲ್ವಿಚಾರಣಾ ಸಮಿತಿಯು ನಿರ್ದಿಷ್ಟಪಡಿಸತಕ್ಕದ್ದು" ಎಂಬ ಪದಗಳಿಗೆ "ಅನುಸರಿಸಬೇಕಾದ ಗುಣಮಟ್ಟಗಳನ್ನು ಮತ್ತು ಕಾರ್ಯವಿಧಾನವನ್ನು ರಾಜ್ಯ ಸರ್ಕಾರವು ನಿಯಮಿಸಬಹುದಾದಂತೆ ಪ್ರವೇಶ ಮೇಲ್ವಿಚಾರಣಾ ಸಮಿತಿಯು ಜಾರಿಗೊಳಿಸತಕ್ಕದ್ದು." ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**8. 9ನೇ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 9ನೇ ಪ್ರಕರಣದಲ್ಲಿ,–

(ಎ) (ii)ನೇ ಖಂಡದಲ್ಲಿ,–

(i) (ಬಿ) ಉಪಖಂಡದ ಕೊನೆಯಲ್ಲಿ "ಮತ್ತು ಉಳಿದ ಶೇಕಡಾ ಐವತ್ತರಷ್ಟು ಸೀಟುಗಳನ್ನು ಕರ್ನಾಟಕದ ವಿದ್ಯಾರ್ಥಿಗಳ ಮೂಲಕ ತುಂಬತಕ್ಕದ್ದು" ಎಂಬ ಪದಗಳನ್ನು ಸೇರಿಸತಕ್ಕದ್ದು;

(ii) ಮೊದಲನೇ ಪರಂತುಕದಲ್ಲಿ "ರಾಜ್ಯದ ಸಾಮಾನ್ಯ ಪ್ರವೇಶ ಪರೀಕ್ಷಾ ಸಮಿತಿಯು ನಡೆಸಿದ ಸಾಮಾನ್ಯ ಪ್ರವೇಶ ಪರೀಕ್ಷೆಯ" ಎಂಬ ಪದಗಳ ತರುವಾಯ "ಅಥವಾ ಭಾರತ ಸರ್ಕಾರ ಅಥವಾ ಸಂದರ್ಭಾನುಸಾರವಾಗಿ ಅದರ ಏಜೆನ್ಸಿಯು ನಡೆಸುವ ಸಾಮಾನ್ಯ ಪ್ರವೇಶ ಪರೀಕ್ಷೆಯ" ಎಂಬ ಪದಗಳನ್ನು ಸೇರಿಸತಕ್ಕದ್ದು; ಮತ್ತು

(iii) ಎರಡನೇ ಪರಂತುಕದಲ್ಲಿ "ಖಾಸಗಿ ಅನುದಾನಿತವಲ್ಲದ ವೃತ್ತಿಶಿಕ್ಷಣ ಸಂಸ್ಥೆಗಳ ಸಂಘವು ನಡೆಸಿದ" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು.

(ಬಿ) (iii) ನೇ ಖಂಡದಲ್ಲಿ,–

(i) (ಎ) ಉಪಖಂಡದಲ್ಲಿ "ಖಾಸಗಿ ವೃತ್ತಿಶಿಕ್ಷಣ ಸಂಸ್ಥೆಗಳ ಸಂಘವು ನಡೆಸಿದ" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು.

(ii) (ಬಿ) ಉಪಖಂಡದ ಕೊನೆಯಲ್ಲಿ "ಮತ್ತು ಉಳಿದ ಶೇಕಡಾ ಐವತ್ತರಷ್ಟು ಸೀಟುಗಳನ್ನು ಕರ್ನಾಟಕದ ವಿದ್ಯಾರ್ಥಿಗಳ ಮೂಲಕ ತುಂಬತಕ್ಕದ್ದು" ಎಂಬ ಪದಗಳನ್ನು ಸೇರಿಸತಕ್ಕದ್ದು;

(iii) ಮೊದಲನೇ ಪರಂತುಕದಲ್ಲಿ "ರಾಜ್ಯ ಸಾಮಾನ್ಯ ಪ್ರವೇಶ ಪರೀಕ್ಷಾ ಸಮಿತಿಯು ನಡೆಸಿದ ಸಾಮಾನ್ಯ ಪ್ರವೇಶ ಪರೀಕ್ಷೆಯ" ಎಂಬ ಪದಗಳ ತರುವಾಯ "ಅಥವಾ ಭಾರತ ಸರ್ಕಾರ ಅಥವಾ ಸಂದರ್ಭಾನುಸಾರವಾಗಿ ಅದರ ಏಜೆನ್ಸಿಯು ನಡೆಸುವ ಸಾಮಾನ್ಯ ಪ್ರವೇಶ ಪರೀಕ್ಷೆಯ" ಎಂಬ ಪದಗಳನ್ನು ಸೇರಿಸತಕ್ಕದ್ದು; ಮತ್ತು

(iv) ಎರಡನೇ ಪರಂತುಕದಲ್ಲಿ "ಖಾಸಗಿ ಅನುದಾನಿತವಲ್ಲದ ವೃತ್ತಿಶಿಕ್ಷಣ ಸಂಸ್ಥೆಗಳ ಸಂಘವು ನಡೆಸಿದ" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು.

(ಸಿ) (iv)ನೇ ಖಂಡದಲ್ಲಿ "ಪ್ರವೇಶ ಮೇಲ್ವಿಚಾರಣಾ ಸಮಿತಿಯು ನಿರ್ದಿಷ್ಟಪಡಿಸಬಹುದಾದಂಥ" ಎಂಬ ಪದಗಳಿಗೆ "ನಿಯಮಿಸಬಹುದಾದ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) ಅಧಿನಿಯಮ, 2006ನ್ನು (2006ರ ಕರ್ನಾಟಕ ಅಧಿನಿಯಮ 8) ಈ ಮುಂದಿನವುಗಳಿಗಾಗಿ ಉಪಬಂಧ ಕಲ್ಪಿಸಲು ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ, ಎಂದರೆ:-

(ಎ) ರಾಜ್ಯ ಸರ್ಕಾರವು ಸಾಮಾನ್ಯ ಪ್ರವೇಶ ಪರೀಕ್ಷೆಯನ್ನು ನಡೆಸುವುದು;

(ಬಿ) ಭಾರತ ಸರ್ಕಾರ ಅಥವಾ ಅದರ ಏಜೆನ್ಸಿಯು ಸಾಮಾನ್ಯ ಪ್ರವೇಶ ಪರೀಕ್ಷೆಯನ್ನು ನಡೆಸುವ ಸಂದರ್ಭದಲ್ಲಿ, ಅಂಥ ಸಾಮಾನ್ಯ ಪ್ರವೇಶ ಪರೀಕ್ಷೆಯಿಂದ ಅಭ್ಯರ್ಥಿಗಳ ರ್‍ಯಾಂಕಿಂಗ್ ಅನ್ನು ಪಡೆಯುವುದು;

(ಸಿ) ಡೀಮ್ಡ್ ವಿಶ್ವವಿದ್ಯಾಲಯಗಳಲ್ಲೂ ಸಹಾ ಸಾಮಾನ್ಯ ಪ್ರವೇಶ ಪರೀಕ್ಷೆ ಅಥವಾ ಭಾರತ ಸರ್ಕಾರ ಅಥವಾ ಅದರ ಏಜೆನ್ಸಿಯ ಮೂಲಕ ಸೀಟುಗಳನ್ನು ತುಂಬುವುದು;

(ಡಿ) ಖಾಸಗಿ ಶೈಕ್ಷಣಿಕ ಸಂಸ್ಥೆಗಳು ಸರ್ಕಾರದೊಂದಿಗೆ ಪರಸ್ಪರ ಒಪ್ಪಂದಕ್ಕೆ ಒಪ್ಪಿದಲ್ಲಿ ಆಗ ಸಾಮಾನ್ಯ ಪ್ರವೇಶ ಪರೀಕ್ಷೆಯನ್ನು ಅಂಥ ಒಪ್ಪಂದದ ಅನುಸಾರವಾಗಿ ನಡೆಸುವುದು;

(ಇ) ರಾಜ್ಯ ಸರ್ಕಾರವು ತಾನು ಅಥವಾ ತನ್ನ ಏಜೆನ್ಸಿಯ ಮೂಲಕ ನಡೆಸುವ ಕೇಂದ್ರೀಕೃತ ಕೌನ್ಸಿಲಿಂಗ್‌ಗಾಗಿ ನಿಯಮಗಳನ್ನು ನಿಯಮಿಸಬಹುದಾದ ಅಂಥ ರೀತಿಯಲ್ಲಿ ರಚಿಸುವುದು;

(ಎಫ್) "ವೃತ್ತಿ ಶಿಕ್ಷಣ ಸಂಸ್ಥೆ" ಎಂಬ ಪರಿಭಾಷೆಯಲ್ಲಿ ಖಾಸಗಿ ವಿಶ್ವವಿದ್ಯಾಲಯಗಳನ್ನು ಸೇರಿಸುವುದು;

(ಜಿ) ಇತರ ಪ್ರಾಸಂಗಿಕ ತಿದ್ದುಪಡಿಗಳನ್ನು ಕೂಡಾ ಮಾಡಲಾಗಿದೆ.

ಆದುದರಿಂದ ಈ ವಿಧೇಯಕ

**ಆರ್ಥಿಕ ಜ್ಞಾಪನ ಪತ್ರ**

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

## ಪ್ರತ್ಯಾಯೋಜಿತ ಶಾಸನ ರಚನಾಧಿಕಾರದ ಕುರಿತ ಜ್ಞಾಪನ ಪತ್ರ

| | |
|---|---|
| **ಖಂಡ 2** | ಸೇರಿಸಲು ಉದ್ದೇಶಿಸಲಾಗಿರುವ 2ನೇ ಪ್ರಕರಣದ (ಜೆಜೆ) ಖಂಡದ ಪರಂತುಕವು ಏಜೆನ್ಸಿಯನ್ನು ಮತ್ತು ಸಾಮಾನ್ಯ ಪ್ರವೇಶ ಪರೀಕ್ಷೆಯನ್ನು ನಡೆಸುವ ವಿಧಾನವನ್ನು ನಿಯಮಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |
| **ಖಂಡ 3** | ಸೇರಿಸಲು ಉದ್ದೇಶಿಸಲಾಗಿರುವ 3ನೇ ಪ್ರಕರಣದ (6)ನೇ ಉಪಪ್ರಕರಣದ ಪರಂತುಕವು ಏಜೆನ್ಸಿಯನ್ನು ಮತ್ತು ವೃತ್ತಿ ಕೋರ್ಸುಗಳ ಎಲ್ಲಾ ಪ್ರವೇಶಗಳಿಗಾಗಿ ಕೇಂದ್ರೀಕೃತ ಕೌನ್ಸಿಲಿಂಗ್ ವಿಧಾನವನ್ನು ನಿಯಮಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |
| **ಖಂಡ 4** | ಪ್ರತಿಯೋಜಿಸಲು ಉದ್ದೇಶಿಸಲಾದ 4ನೇ ಪ್ರಕರಣವು ಏಜೆನ್ಸಿಯನ್ನು ಮತ್ತು ಪ್ರವೇಶಗಳಿಗಾಗಿ ಕೇಂದ್ರೀಕೃತ ಕೌನ್ಸಿಲಿಂಗ್ ವಿಧಾನವನ್ನು ನಿಯಮಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |
| **ಖಂಡ 5** | ಸೇರಿಸಲು ಉದ್ದೇಶಿಸಲಾದ 4ಎ ಪ್ರಕರಣದ (1)ನೇ ಉಪಪ್ರಕರಣದ (ಡಿ) ಖಂಡದ ಪರಂತುಕವು ಸೀಟುಗಳ ಹಂಚಿಕೆಗಾಗಿ ಕೇಂದ್ರೀಕೃತ ಕೌನ್ಸಿಲಿಂಗ್ ಮೂಲಕ ಸೀಟುಗಳ ಹಂಚಿಕೆಗಾಗಿ ಏಜೆನ್ಸಿಯನ್ನು ನಿಯಮಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |
| **ಖಂಡ 6** | **(i)** ಸೇರಿಸಲು ಉದ್ದೇಶಿಸಲಾದ 4ಬಿ ಪ್ರಕರಣದ (2)ನೇ ಉಪಪ್ರಕರಣದ ಪರಂತುಕವು ಏಜೆನ್ಸಿಯನ್ನು ಮತ್ತು ಡೀಮ್ಡ್ ವಿಶ್ವವಿದ್ಯಾಲಯ ಸಂಸ್ಥೆಗಳಿಗೆ ಪ್ರವೇಶಗಳಿಗಾಗಿ ವಿಧಾನವನ್ನು ನಿಯಮಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.<br>**(ii)** ಸೇರಿಸಲು ಉದ್ದೇಶಿಸಲಾದ 4ಬಿ ಪ್ರಕರಣದ (3)ನೇ ಉಪಪ್ರಕರಣದ ಪರಂತುಕವು,-<br>(ಎ) ಕೇಂದ್ರೀಕೃತ ಕೌನ್ಸಿಲಿಂಗ್‌ಗಾಗಿ ಸೀಟುಗಳ ಹಂಚಿಕೆಗಾಗಿ ಏಜೆನ್ಸಿಯನ್ನು;<br>(ಬಿ) ಡೀಮ್ಡ್ ವಿಶ್ವವಿದ್ಯಾಲಯಗಳ ಸಂಘವನ್ನು ರಚಿಸಲು ಅದು ವಿಫಲವಾದ ಸಂದರ್ಭದಲ್ಲಿ ಏಜೆನ್ಸಿಯನ್ನು ಮತ್ತು ಡೀಮ್ಡ್ ವಿಶ್ವವಿದ್ಯಾಲಯಗಳ ಕೌನ್ಸಿಲಿಂಗ್ ವಿಧಾನವನ್ನು,<br>– ನಿಯಮಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |
| **ಖಂಡ 7** | 5ನೇ ಪ್ರಕರಣದ (7)ನೇ ಉಪಪ್ರಕರಣವು ಪ್ರವೇಶಗಳಿಗಾಗಿ ಅನುಸರಿಸಬೇಕಾದ ಗುಣಮಟ್ಟಗಳು ಮತ್ತು ಕಾರ್ಯವಿಧಾನಗಳನ್ನು ನಿಯಮಗಳ ಮೂಲಕ ನಿಯಮಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |
| **ಖಂಡ 8** | ಪ್ರತಿಯೋಜಿಸಲು ಉದ್ದೇಶಿಸಲಾದ 9ನೇ ಪ್ರಕರಣದ (iv)ನೇ ಖಂಡವು ಕೇಂದ್ರೀಕೃತ ಕೌನ್ಸಿಲಿಂಗ್ ಅನ್ನು ನಡೆಸುವ ವಿಧಾನವನ್ನು ನಿಯಮಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |

ಪ್ರಸ್ತಾವಿತ ಶಾಸನ ರಚನಾಧಿಕಾರದ ಪ್ರತ್ಯಾಯೋಜನೆಯು ವಾಡಿಕೆಯ ಸ್ವರೂಪದ್ದಾಗಿದೆ.

ಬಸವರಾಜ ರಾಯರೆಡ್ಡಿ
ಉನ್ನತ ಶಿಕ್ಷಣ ಮಂತ್ರಿಗಳು

**ಎಸ್. ಮೂರ್ತಿ**
ಕಾರ್ಯದರ್ಶಿ (ಪ್ರ)
ಕರ್ನಾಟಕ ವಿಧಾನ ಸಭೆ

## ಅನುಬಂಧ

**ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) ಅಧಿನಿಯಮ, 2006ರ (2006ರರ ಕರ್ನಾಟಕ ಅಧಿನಿಯಮ 8) ಉದ್ಧೃತ ಭಾಗ**

Xxx xxx xxx

**2. ಪರಿಭಾಷೆಗಳು.–** Xxx xxx xxx

(ಎಫ್)" ಸಾಮಾನ್ಯ ಪ್ರವೇಶ ಪರೀಕ್ಷಾ ಘಟಕ ಅಥವಾ ಸಮಿತಿ" ಎಂದರೆ, ಸಾಮಾನ್ಯ ಪ್ರವೇಶ ಪರೀಕ್ಷೆಯನ್ನು ನಡೆಸುವ, 3ನೇ ಪ್ರಕರಣದ ಅಡಿಯಲ್ಲಿ ರಚಿತವಾದ ರಾಜ್ಯ ಸರ್ಕಾರದ ಏಜೆನ್ಸಿ.

Xxx xxx xxx

(ಜೆಜೆ) "ಸಂಸ್ಥೆಯ ಸೀಟುಗಳು" ಎಂದರೆ, ಅಲ್ಪಸಂಖ್ಯಾತೇತರ ಅಥವಾ ಅಲ್ಪಸಂಖ್ಯಾತ ಖಾಸಗಿ ಅನುದಾನಿತವಲ್ಲದ ವೃತ್ತಿ ಶಿಕ್ಷಣ ಸಂಸ್ಥೆಗಳ ಸಂಘಟನೆಯು ನಡೆಸುವ ಸಾಮಾನ್ಯ ಪ್ರವೇಶ ಪರೀಕ್ಷೆಯ ಮೂಲಕ ಖಾಸಗಿ ಅನುದಾನಿತವಲ್ಲದ ವೃತ್ತಿ ಶಿಕ್ಷಣ ಸಂಸ್ಥೆಗಳು ತುಂಬುವ, ಸರ್ಕಾರಿ ಸೀಟುಗಳನ್ನು ಹೊರತುಪಡಿಸಿದ, ಸೀಟುಗಳು.

Xxx xxx xxx

(ಎನ್) "ಅನಿವಾಸಿ-ಭಾರತೀಯ" ಎಂದರೆ, ಭಾರತೀಯ ಮೂಲದ ತಂದೆ ಅಥವಾ ತಾಯಿಗೆ ಜನಿಸಿದ ಮತ್ತು ದೇಶದ ಹೊರಗೆ ವಾಸಿಸುತ್ತಿರುವ ಮತ್ತು ಸಮಾನ ಅರ್ಹತಾ ಪರೀಕ್ಷೆಯಲ್ಲಿ ಭಾರತದ ಹೊರಗೆ ಉತ್ತೀರ್ಣನಾದ ಒಬ್ಬ ವಿದ್ಯಾರ್ಥಿ;

Xxx xxx xxx

(ಕ್ಯೂ) "ವೃತ್ತಿ ಶಿಕ್ಷಣ ಸಂಸ್ಥೆ" ಎಂದರೆ, ಸಕ್ಷಮ ಶಾಸನಬದ್ಧ ನಿಕಾಯವು ಅನುಮೋದಿಸಿದ ಅಥವಾ ಮಾನ್ಯತೆ ನೀಡಿದ ಪದವಿಯನ್ನು, ಡಿಪ್ಲೋಮಾವನ್ನು ಅಥವಾ ಯಾವುದೇ ಹೆಸರಿನಿಂದ ಕರೆಯಲಾಗುವ ಒಂದು ಪ್ರಮಾಣ ಪತ್ರವನ್ನು ಪಡೆಯಲು ಅವಕಾಶಮಾಡಿಕೊಡುವಂಥ ವೃತ್ತಿ ಶಿಕ್ಷಣವನ್ನು ನೀಡುತ್ತಿರುವ ಅಥವಾ ವೃತ್ತಿ ಶಿಕ್ಷಣ ವ್ಯಾಸಂಗಕ್ರಮಗಳನ್ನು ನಡೆಸುತ್ತಿರುವ ಮತ್ತು ಒಂದು ವಿಶ್ವವಿದ್ಯಾನಿಲಯಕ್ಕೆ ಸಂಯೋಜಿತವಾದ ಯಾವುದೇ ಹೆಸರನ್ನುಳ್ಳ ಒಂದು ಕಾಲೇಜು ಅಥವಾ ಶಾಲೆ ಅಥವಾ ಒಂದು ಸಂಸ್ಥೆ;

Xxx xxx xxx

(ಎಸ್)"ಮೀಸಲಿಟ್ಟ ಸೀಟುಗಳು" ಎಂದರೆ, ಸರ್ಕಾರಿ ಕಾಲೇಜುಗಳಲ್ಲಿ, ವಿಶ್ವವಿದ್ಯಾನಿಲಯಗಳ ಘಟಕ ಕಾಲೇಜುಗಳಲ್ಲಿ, ಖಾಸಗಿ ಅನುದಾನಿತ ಮತ್ತು ಅನುದಾನಿತವಲ್ಲದ ವೃತ್ತಿ ಶಿಕ್ಷಣ ಸಂಸ್ಥೆಗಳಲ್ಲಿ, ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳಿಗೆ ಸೇರಿದ ವ್ಯಕ್ತಿಗಳಿಗಾಗಿ ಮೀಸಲಿಟ್ಟ ಸೀಟುಗಳು;

Xxx xxx xxx

**3. ರಾಜ್ಯ ಸಾಮಾನ್ಯ ಪ್ರವೇಶ ಪರೀಕ್ಷಾ ಸಮಿತಿ.–** (1) ಈ ಮುಂದಿನವರನ್ನೊಳಗೊಂಡ ಒಂದು ರಾಜ್ಯ ಸಾಮಾನ್ಯ ಪ್ರವೇಶ ಪರೀಕ್ಷಾ ಸಮಿತಿ ಇರತಕ್ಕದ್ದು.

Xxx xxx xxx

ಪರಂತು, ಎಲ್ಲಾ ಅನುದಾನಿತವಲ್ಲದ ಖಾಸಗಿ ವೃತ್ತಿ ಶಿಕ್ಷಣ ಸಂಸ್ಥೆಗಳು, ಅನಿವಾಸಿ ಭಾರತೀಯ ವಿದ್ಯಾರ್ಥಿಗಳಿಗಾಗಿ ಮೀಸಲಿಟ್ಟ ಸೀಟುಗಳ ಹೊರತಾಗಿ, ತಮ್ಮ ಎಲ್ಲ ಸೀಟುಗಳನ್ನು ರಾಜ್ಯ ಸಾಮಾನ್ಯ ಪ್ರವೇಶ ಪರೀಕ್ಷಾ ಘಟಕದ ಮೂಲಕ ಭರ್ತಿಮಾಡಲು ಒಪ್ಪಿಕೊಂಡರೆ ಮತ್ತು ಆಯ್ಕೆ ಮಾಡಿಕೊಂಡರೆ, ಆಗ ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ, ವೈದ್ಯಕೀಯ, ದಂತವೈದ್ಯ, ಇಂಜಿನಿಯರಿಂಗ್ ಮತ್ತು ಇತರ ಫ್ಯಾಕಲ್ಟಿಗಳಲ್ಲಿ ಶಿಕ್ಷಣ ನೀಡುತ್ತಿರುವ ಖಾಸಗಿ ಅನುದಾನಿತವಲ್ಲದ ವೃತ್ತಿ ಶಿಕ್ಷಣ ಸಂಸ್ಥೆಗಳ ಆಡಳಿತ ವರ್ಗದ ಪ್ರತಿನಿಧಿಗಳನ್ನು ಒಳಗೊಂಡಂತೆ, ತಾನು ಸೂಕ್ತವೆಂದು ಭಾವಿಸುವಷ್ಟು ಸಂಖ್ಯೆಯ ಸದಸ್ಯರು ಇರುವ ರಾಜ್ಯ ಸಾಮಾನ್ಯ ಪ್ರವೇಶ ಪರೀಕ್ಷಾ ಸಮಿತಿಯನ್ನು ಪುನರ್‌ರಚಿಸಬಹುದು.

(2) ಸಮಿತಿಯು, ವೃತ್ತಿ ಶಿಕ್ಷಣ ಸಂಸ್ಥೆಗಳಲ್ಲಿ ಸರ್ಕಾರಿ ಸೀಟುಗಳಿಗೆ ವಿದ್ಯಾರ್ಥಿಗಳ ಪ್ರವೇಶಕ್ಕಾಗಿ ಸಾಮಾನ್ಯ ಪ್ರವೇಶ ಪರೀಕ್ಷೆಯನ್ನು ನಡೆಸತಕ್ಕದ್ದು. ಪರೀಕ್ಷೆ ಸುಗಮವಾಗಿ ಆಗುವಂತೆ ನೋಡಿಕೊಳ್ಳುವುದಕ್ಕಾಗಿ ರಾಜ್ಯ ಸರ್ಕಾರವು, ಅಗತ್ಯವಾಗಬಹುದಾದಷ್ಟು ಸಂಖ್ಯೆಯ ಅಧಿಕಾರಿಗಳನ್ನು ಮತ್ತು ನೌಕರರನ್ನು ಸಾಮಾನ್ಯ ಪ್ರವೇಶ ಪರೀಕ್ಷಾ ಘಟಕಕ್ಕೆ ಒದಗಿಸತಕ್ಕದ್ದು.

Xxx xxx xxx

(6) ಪ್ರತಿಯೊಂದು ಸರ್ಕಾರಿ ಸೀಟಿಗೆ ಪ್ರವೇಶವನ್ನು, ರಾಜ್ಯ ಸಾಮಾನ್ಯ ಪ್ರವೇಶ ಪರೀಕ್ಷಾ ಸಮಿತಿಯು ನಡೆಸಿದ ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ ಪಡೆದ ಮೆರಿಟ್ ಆಧಾರದ ಮೇಲೆ ಹಾಗೂ ಆ ತರುವಾಯದ ಕೇಂದ್ರೀಯ ಕೌನ್ಸಿಲಿಂಗ್ ಮೂಲಕ ರಾಜ್ಯದ ಮೀಸಲಾತಿ ನೀತಿಗೊಳಪಟ್ಟು ಮಾಡತಕ್ಕದ್ದು.

Xxx xxx xxx

**4. ಅನುದಾನಿತವಲ್ಲದ ವೃತ್ತಿ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ವಿಧಾನ.–** ಯಾವುದೇ ಒಂದು ವ್ಯಾಸಂಗ ವಿಷಯದಲ್ಲಿ ವೃತ್ತಿ ಶಿಕ್ಷಣವನ್ನು ನೀಡುತ್ತಿರುವ ಅಲ್ಪಸಂಖ್ಯಾತ ಅಥವಾ ಅಲ್ಪಸಂಖ್ಯಾತೇತರ ಎಲ್ಲಾ ಅನುದಾನಿತವಲ್ಲದ ವೃತ್ತಿ ಶಿಕ್ಷಣ ಸಂಸ್ಥೆಗಳ ಸಂಘಟನೆಯು ಸಾಮಾನ್ಯ ಪ್ರವೇಶ ಪರೀಕ್ಷೆಯ ಮೂಲಕವೇ ಪ್ರವೇಶವನ್ನು ನೀಡತಕ್ಕದ್ದು:
ಪರಂತು, ಸರ್ಕಾರಿ ಸೀಟುಗಳನ್ನು ಹೊರತುಪಡಿಸಿದ ಸೀಟುಗಳಿಗಾಗಿ, ಸಾಮಾನ್ಯ ಪ್ರವೇಶ ಪರೀಕ್ಷೆಯ ಮೂಲಕ ಪ್ರವೇಶವನ್ನು ನೀಡುವುದಕ್ಕೆ ಇಚ್ಛಿಸುವ ಯಾವುದೇ ಅನುದಾನಿತವಲ್ಲದ ವೃತ್ತಿ ಶಿಕ್ಷಣ ಸಂಸ್ಥೆ ಅಥವಾ ಡೀಮ್ಡ್ ವಿಶ್ವವಿದ್ಯಾಲಯವು, ಸಾಮಾನ್ಯ ಪ್ರವೇಶ ಪರೀಕ್ಷೆ ಸಮಿತಿಯ ಜೊತೆಗೆ ಸೇರುವ ಮತ್ತು ಅರ್ಹತೆಯ ಕ್ರಮದಲ್ಲಿ ಮತ್ತು ಕೌನ್ಸಿಲಿಂಗ್ ಮೂಲಕ ಪ್ರವೇಶವನ್ನು ನೀಡುವ ತಮ್ಮ ಆಯ್ಕೆಯನ್ನು ಕೂಡಾ ಚಲಾಯಿಸಹುದು.

Xxx xxx xxx

**4ಎ. ಸಮ್ಮತಾಭಿಪ್ರಾಯದ ಒಪ್ಪಂದದ ಸಂದರ್ಭದಲ್ಲಿ ಪ್ರವೇಶ ವಿಧಾನ.–** (1) ಈ ಅಧಿನಿಯಮದಲ್ಲಿ ಏನೇ ಇದ್ದರೂ, ರಾಜ್ಯ ಸರ್ಕಾರ ಮತ್ತು ಅಲ್ಪಸಂಖ್ಯಾತ ಅಥವಾ ಅಲ್ಪಸಂಖ್ಯಾತೇತರ ಅನುದಾನಿತವಲ್ಲದ ವೃತ್ತಿ ಶಿಕ್ಷಣ ಸಂಸ್ಥೆಗಳು, ಸದರಿ ಅನುದಾನಿತವಲ್ಲದ ವೃತ್ತಿ ಶಿಕ್ಷಣ ಸಂಸ್ಥೆಗಳಲ್ಲಿ ಅಂಥ ಸೀಟುಗಳ ಸಂಬಂಧದಲ್ಲಿ, ಸೀಟುಗಳ ಹಂಚಿಕೆ ಮತ್ತು ಶುಲ್ಕ ನಿಗದಿಯ ಕುರಿತು ಸಮ್ಮತಾಭಿಪ್ರಾಯ ವ್ಯವಸ್ಥೆ ಅಥವಾ ಒಪ್ಪಂದಕ್ಕೆ ಬರಲು, ರಾಜ್ಯ ಸರ್ಕಾರ ಮತ್ತು ಅಲ್ಪಸಂಖ್ಯಾತ ಅಥವಾ ಅಲ್ಪಸಂಖ್ಯಾತೇತರ ಅನುದಾನಿತವಲ್ಲದ ವೃತ್ತಿ ಶಿಕ್ಷಣ ಸಂಸ್ಥೆಗಳು ಒಪ್ಪಿದ ಸಂದರ್ಭದಲ್ಲಿ, ಅಂಥ ವರ್ಷದಲ್ಲಿ, ರಾಜ್ಯ ಸರ್ಕಾರ ಮತ್ತು ಖಾಸಗಿ ವೃತ್ತಿ ಶಿಕ್ಷಣ ಸಂಸ್ಥೆಗಳ ಮೂಲಕ ಒಪ್ಪಿಗೆಯಾದಂಥ ಸಂಖ್ಯೆಯ ಸೀಟುಗಳಿಗೆ ಪ್ರವೇಶವನ್ನು, ವೃತ್ತಿ ಶಿಕ್ಷಣ ಸಂಸ್ಥೆಗಳಲ್ಲಿನ ಸರ್ಕಾರಿ ಸೀಟುಗಳಿಗೆ ಪ್ರವೇಶಕ್ಕಾಗಿ ಆಯ್ಕೆಯ ಕುರಿತು ಸರ್ಕಾರವು ನಿಯಮಿಸಬಹುದಾದಂಥ ನಿಯಮಗಳಿಗೆ ಮತ್ತು 371ಜೆ ಅನುಚ್ಛೇದದ ಅಡಿಯಲ್ಲಿನ ಮೀಸಲಾತಿಯನ್ನು ಒಳಗೊಂಡಂತೆ ರಾಜ್ಯದ ಮೀಸಲಾತಿ ಕಾರ್ಯನೀತಿಗೆ ಅನುಸಾರವಾಗಿ ಸರ್ಕಾರಿ ಸೀಟುಗಳಂತೆ, ಸಾಮಾನ್ಯ ಪ್ರವೇಶ ಪರೀಕ್ಷಾ ಸಮಿತಿಯ ಮೂಲಕ ಮಾಡತಕ್ಕದ್ದು. ಉಳಿದ ಸೀಟುಗಳನ್ನು, ಖಾಸಗಿ ವೃತ್ತಿ ಶಿಕ್ಷಣ ಸಂಸ್ಥೆಗಳ ಸಂಘಟನೆ ಅಥವಾ ಧಾರ್ಮಿಕ ಹಾಗೂ ಭಾಷಾ ಅಲ್ಪಸಂಖ್ಯಾತ ಸಂಸ್ಥೆಗಳ ಸಂಘಟನೆಯು, ನಡೆಸುವ ಸಾಮಾನ್ಯ ಪ್ರವೇಶ ಪರೀಕ್ಷೆಯ ಮೂಲಕ, ನಿಯಮಿಸಬಹುದಾದಂಥ ನಿಯಮಗಳಿಗೆ ಒಳಪಟ್ಟು

ಸಮ್ಮತಾಭಿಪ್ರಾಯದ ಒಪ್ಪಂದಕ್ಕೆ ಅನುಸಾರವಾಗಿ ನ್ಯಾಯ ಸಮ್ಮತವಾದ, ಪಾರದರ್ಶಕವಾದ ಮತ್ತು ಶೋಷಣೆಯಾಗದ ರೀತಿಯಲ್ಲಿ ಕೇಂದ್ರಿಕೃತ ಕೌನ್ಸಿಲಿಂಗ್ ಮಾಡಿ ಅರ್ಹತೆಯ ಆಧಾರದ ಮೇಲೆ, ತುಂಬತಕ್ಕದ್ದು. ಸಮ್ಮತಾಭಿಪ್ರಾಯದ ವ್ಯವಸ್ಥೆ ಅಥವಾ ಒಪ್ಪಂದಕ್ಕೆ ಒಳಪಟ್ಟು, ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ, ಈ ಕೆಳಗೆ ನಿರ್ದಿಷ್ಟಪಡಿಸಿದ ರೀತಿಯಲ್ಲಿ, ರಾಜ್ಯ ಸಾಮಾನ್ಯ ಪ್ರವೇಶ ಪರೀಕ್ಷೆ ಸಮಿತಿ ಮತ್ತು ಖಾಸಗಿ ಅನುದಾನಿತವಲ್ಲದ ವೃತ್ತಿ ಶಿಕ್ಷಣ ಸಂಸ್ಥೆಗಳ ಸಂಘಟನೆಯ ಮೂಲಕ ತುಂಬಬೇಕಾದ ಸೀಟು ಮ್ಯಾಟ್ರಿಕ್ಸ್ ಅನ್ನು, ಪ್ರಕಟಿಸತಕ್ಕದ್ದು, ಎಂದರೆ:–

Xxx xxx xxx

(ಡಿ) ಅನುದಾನಿತವಲ್ಲದ ಅಲ್ಪಸಂಖ್ಯಾತ ಶೈಕ್ಷಣಿಕ ಸಂಸ್ಥೆಗಳಲ್ಲಿ ಸ್ನಾತಕೋತ್ತರ ವೈದ್ಯಕೀಯ/ದಂತ ವೈದ್ಯಕೀಯಕ್ಕೆ ಪ್ರವೇಶಾವಕಾಶವಿರುವ ಒಟ್ಟು ಸೀಟುಗಳ ಪೈಕಿ, ಪ್ರಿ–ಕ್ಲಿನಿಕಲ್, ಪ್ಯಾರಾ–ಕ್ಲಿನಿಕಲ್ ಮತ್ತು ಕ್ಲಿನಿಕಲ್ ವ್ಯಾಸಂಗ ವಿಷಯಗಳ ಮೇಲೆ, ವ್ಯಾಸಂಗ ವಿಷಯಗಳ ಸರದಿಯ ಮೂಲಕ, ಪ್ರತಿ ವರ್ಷವೂ,–

(i) ಶೇಕಡಾ ಇಪ್ಪತ್ತಕ್ಕಿಂತ ಕಡಿಮೆಯಿಲ್ಲದಷ್ಟು ಸೀಟುಗಳನ್ನು ರಾಜ್ಯ ಸಾಮಾನ್ಯ ಪ್ರವೇಶ ಪರೀಕ್ಷೆ ಸಮಿತಿಯು ನಡೆಸುವ ಸಾಮಾನ್ಯ ಪ್ರವೇಶ ಪರೀಕ್ಷೆಯ ಮೂಲಕ ತುಂಬತಕ್ಕದ್ದು.

(ii) ಶೇಕಡಾ ಅರವತ್ತಕ್ಕಿಂತ ಹೆಚ್ಚಲ್ಲದಷ್ಟು ಸೀಟುಗಳನ್ನು, ಅಲ್ಪಸಂಖ್ಯಾತ ಅನುದಾನಿತವಲ್ಲದ ವೃತ್ತಿ ಶಿಕ್ಷಣ ಸಂಸ್ಥೆಗಳ ಸಂಘಟನೆಯು ನಡೆಸುವ ಸಾಮಾನ್ಯ ಪ್ರವೇಶ ಪರೀಕ್ಷೆಯ ಅರ್ಹತಾ ಪಟ್ಟಿಯ ಮೂಲಕ ತುಂಬತಕ್ಕದ್ದು; ಮತ್ತು

(iii) ಶೇಕಡಾ ಇಪ್ಪತ್ತಕ್ಕಿಂತ ಹೆಚ್ಚಲ್ಲದಷ್ಟು ಸೀಟುಗಳನ್ನು ಅನಿವಾಸಿ ಭಾರತೀಯರು/ ಮ್ಯಾನೇಜ್‌ಮೆಂಟ್ ಕೋಟಾ ಅಭ್ಯರ್ಥಿಗಳ ಮೂಲಕ ತುಂಬತಕ್ಕದ್ದು.

Xxx xxx xxx

**4ಬಿ. ಡೀಮ್ಡ್ ವಿಶ್ವವಿದ್ಯಾಲಯ ಸಂಸ್ಥೆಗಳಲ್ಲಿ ಪ್ರವೇಶ ವಿಧಾನ.–** (1) xx xx xx

(2) ವಿಶ್ವವಿದ್ಯಾಲಯ ಅನುದಾನ ಆಯೋಗದ ಮಾರ್ಗಸೂಚಿಗಳನ್ನು ಅನುಸರಿಸದಿರುವ ಡೀಮ್ಡ್ ವಿಶ್ವವಿದ್ಯಾಲಯದ ಅಲ್ಪಸಂಖ್ಯಾತ ಅಥವಾ ಸಂದರ್ಭಾನುಸಾರವಾಗಿ ಅಲ್ಪಸಂಖ್ಯಾತೇತರ ಸಂಸ್ಥೆಗಳು, ತಮ್ಮ ಸಂಸ್ಥೆಯ ಅಂಥ ಸಂಖ್ಯೆಯ ಸೀಟುಗಳನ್ನು, ಸಾಮಾನ್ಯ ಪ್ರವೇಶ ಪರೀಕ್ಷೆಯ ಮೂಲಕ ಮತ್ತು ಸಂಘಟನೆಯು ನಡೆಸುವ ಸಾಮಾನ್ಯ ಪ್ರವೇಶ ಪರೀಕ್ಷೆಯ ಮೂಲಕ ಹಾಗೂ ರಾಜ್ಯ ಸರ್ಕಾರವು ಅಧಿಸೂಚಿಸಬಹುದಾದಂತೆ ತುಂಬತಕ್ಕದ್ದು.

(3) ಡೀಮ್ಡ್ ವಿಶ್ವವಿದ್ಯಾಲಯ ಸಂಸ್ಥೆಗಳು ವಿಶ್ವವಿದ್ಯಾಲಯ ಅನುದಾನ ಆಯೋಗದ ವಿನಿಯಮಗಳನ್ನು ಅನುಸರಿಸುತ್ತಿದ್ದು ಆದರೆ ರಾಜ್ಯ ಸರ್ಕಾರದೊಂದಿಗೆ ಸಮ್ಮತಾಭಿಪ್ರಾಯದ ಒಪ್ಪಂದಕ್ಕೆ ಒಪ್ಪಿಕೊಂಡಿದ್ದಲ್ಲಿ, ಅಂಥ ಸಮ್ಮತಾಭಿಪ್ರಾಯದ ಒಪ್ಪಂದದಲ್ಲಿ ಒಪ್ಪಬಹುದಾದುದಕ್ಕೆ ಒಳಪಟ್ಟು ಅಂಥ ಸಂಸ್ಥೆಗಳು ನೀಡುವ ಅಂಥ ರಿಯಾಯಿತಿ ಮತ್ತು ವಿದ್ಯಾರ್ಥಿವೇತನದೊಂದಿಗೆ ಅಂಥ ಶುಲ್ಕದ ದರದಲ್ಲಿ ರಾಜ್ಯ ಸರ್ಕಾರವು ನಡೆಸುವ ಸಾಮಾನ್ಯ ಪ್ರವೇಶ ಪರೀಕ್ಷಾ ಸಮಿತಿಯ ಮೂಲಕ ತುಂಬಬೇಕಾದ ಪದವಿ ಮತ್ತು ಸ್ನಾತಕೋತ್ತರ ವೈದ್ಯಕೀಯ ವ್ಯಾಸಂಗ ಕ್ರಮದಲ್ಲಿ ಎರಡರಲ್ಲೂ ಪ್ರವೇಶಾವಕಾಶವಿರುವ ಒಟ್ಟು ಸೀಟುಗಳ ಶೇಕಡ ಇಪ್ಪತ್ತೈದಕ್ಕಿಂತ ಕಡಿಮೆಯಾಗಿರತಕ್ಕದ್ದಲ್ಲ ಮತ್ತು ಸಂಬಂಧಪಟ್ಟ ಸಂಸ್ಥೆಗಳು ಅರ್ಹತೆಯನ್ನು ಅನುಸರಿಸುವ ಮೂಲಕ ಅನಿವಾಸಿ ಭಾರತೀಯರು/ಮ್ಯಾನೇಜ್‌ಮೆಂಟ್ ಕೋಟಾದಿಂದ ತುಂಬಬೇಕಾದ ಸೀಟುಗಳು ಪ್ರವೇಶಾವಕಾಶವಿರುವ ಒಟ್ಟು ಸೀಟುಗಳ ಶೇಕಡಾ ಇಪ್ಪತ್ತೈದಕ್ಕಿಂತ

ಹೆಚ್ಚಿರತಕ್ಕದಲ್ಲ. ಉಳಿದ ಶೇಕಡಾ ಐವತ್ತು, ಡೀಮ್ಡ್ ವಿಶ್ವವಿದ್ಯಾಲಯ ಸಂಸ್ಥೆಗಳು ನಡೆಸುವ ಪ್ರವೇಶ ಪರೀಕ್ಷೆಯ ಮೂಲಕ (ಪ್ರಸ್ತುತ ಅನುಸರಿಸುತ್ತಿರುವಂತೆ) ತುಂಬಬೇಕಾದ ಸಂಸ್ಥೆಯ ಸೀಟುಗಳಾಗಿರತಕ್ಕದ್ದು.

Xxx xxx xxx

**5. ಪ್ರವೇಶ ಮೇಲ್ವಿಚಾರಣಾ ಸಮಿತಿ.–** (1) Xxx xxx xxx

(7) ಅಲ್ಪಸಂಖ್ಯಾತೇತರ ಅಥವಾ ಸಂದರ್ಭಾನುಸಾರವಾಗಿ ಅಲ್ಪಸಂಖ್ಯಾತ ಅನುದಾನಿತವಲ್ಲದ ಖಾಸಗಿ ವೃತ್ತಿ ಶಿಕ್ಷಣ ಸಂಸ್ಥೆಗಳ ಸಂಘವು ಸಾಮಾನ್ಯ ಪ್ರವೇಶ ಪರೀಕ್ಷೆಯನ್ನು ನಡೆಸಲು ಅನುಸರಿಸಬೇಕಾದ ಗುಣಮಟ್ಟವನ್ನು ಮತ್ತು ಕಾರ್ಯವಿಧಾನಗಳನ್ನು ಪ್ರವೇಶ ಮೇಲ್ವಿಚಾರಣಾ ಸಮಿತಿಯು ನಿರ್ದಿಷ್ಟಪಡಿಸತಕ್ಕದ್ದು ಹಾಗೂ ಸಾಮಾನ್ಯ ಪ್ರವೇಶ ಪರೀಕ್ಷೆಯ ಅಧೀಕ್ಷಣೆ ಮತ್ತು ಮೇಲ್ವಿಚಾರಣೆಯನ್ನು ಮಾಡತಕ್ಕದ್ದು. ಅಲ್ಪಸಂಖ್ಯಾತೇತರ ಅಥವಾ ಸಂದರ್ಭಾನುಸಾರವಾಗಿ ಅಲ್ಪಸಂಖ್ಯಾತ ಅನುದಾನಿತವಲ್ಲದ ಖಾಸಗಿ ವೃತ್ತಿ ಶಿಕ್ಷಣ ಸಂಸ್ಥೆಗಳ ಸಂಘವು ಕೇಂದ್ರೀಯ ಕೌನ್ಸಿಲಿಂಗ್ ಮತ್ತು ಪ್ರವೇಶಗಳನ್ನು ಮಾಡುವಾಗ ಅವನ್ನು ನ್ಯಾಯಯುತವಾಗಿ, ಪಾರದರ್ಶಕವಾಗಿ ಮತ್ತು ಶೋಷಣೆಯಾಗದಂಥ ರೀತಿಯಲ್ಲಿ ನಡೆಸುವಂತೆ ನೋಡಿಕೊಳ್ಳುವ ಉದ್ದೇಶದಿಂದ ಪ್ರವೇಶ ಮೇಲ್ವಿಚಾರಣಾ ಸಮಿತಿಯು ಅವುಗಳ ಅಧೀಕ್ಷಣೆ ಮತ್ತು ಮೇಲ್ವಿಚಾರಣೆಯನ್ನೂ ಮಾಡತಕ್ಕದ್ದು. ಇದು ಸುಗಮವಾಗಿ ಆಗುವಂತೆ ನೋಡಿಕೊಳ್ಳುವ ಸಲುವಾಗಿ ರಾಜ್ಯ ಸರ್ಕಾರವು ಪ್ರವೇಶ ಮೇಲ್ವಿಚಾರಣಾ ಸಮಿತಿಗೆ ಅವಶ್ಯವಿರುವಷ್ಟು ಸಂಖ್ಯೆಯಲ್ಲಿ ಅಧಿಕಾರಿಗಳನ್ನು ಮತ್ತು ನೌಕರರುಗಳನ್ನು ಒದಗಿಸತಕ್ಕದ್ದು.

Xxx xxx xxx

**9. ಸೀಟುಗಳ ಹಂಚಿಕೆ ಮತ್ತು ಮೀಸಲಾತಿ.–** ವೃತ್ತಿಶಿಕ್ಷಣ ಸಂಸ್ಥೆಗಳಲ್ಲಿ ಒಟ್ಟು ಮಂಜೂರಾದ ಸೀಟುಗಳಲ್ಲಿ,

Xxx xxx xxx

(ii) (ಎ) ಅನುದಾನಿತವಲ್ಲದ ಅಲ್ಪಸಂಖ್ಯಾತವಲ್ಲದ ಸಂಸ್ಥೆಯಲ್ಲಿ ರಾಜ್ಯ ಸರ್ಕಾರವು ಅಧಿಸೂಚಿಸಿದಂತೆ ಶೇ.50 ಐವತ್ತರಷ್ಟು ಸೀಟುಗಳನ್ನು ರಾಜ್ಯದ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರೆ ಹಿಂದುಳಿದ ವರ್ಗಗಳಿಗೆ ಸಂಬಂಧಪಟ್ಟ ವಿದ್ಯಾರ್ಥಿಗಳಿಗಾಗಿ ಮೀಸಲಿರಿಸತಕ್ಕದ್ದು; ಮತ್ತು

(ಬಿ) ಉಳಿದ ಸೀಟುಗಳು ಸಾಮಾನ್ಯ ಪ್ರವರ್ಗಕ್ಕೆ ಸೇರಿದವುಗಳಾಗಿರತಕ್ಕದ್ದು. ಸಾಮಾನ್ಯ ಪ್ರವರ್ಗದ ಸೀಟುಗಳ ಪೈಕಿ ಶೇಕಡಾ ಹದಿನೈದರಷ್ಟು ಸೀಟುಗಳನ್ನು ಅನಿವಾಸಿ ಭಾರತೀಯ ಕೋಟಾಕ್ಕೆ ಸಂಬಂಧಪಟ್ಟ ವಿದ್ಯಾರ್ಥಿಗಳಿಂದ ಭರ್ತಿಮಾಡಿಕೊಳ್ಳಬಹುದಾಗಿದೆ:

ಪರಂತು, ವಿದ್ಯಾರ್ಥಿಗಳು ದೊರೆಯದ ಕಾರಣಗಳಿಂದಾಗಿ, ಅನುದಾನಿತವಲ್ಲದ ಅಲ್ಪಸಂಖ್ಯಾತವಲ್ಲದ ಸಂಸ್ಥೆಗಳಲ್ಲಿ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರೆ ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗಾಗಿ ಮೀಸಲಿರಿಸಲಾದ ಸೀಟುಗಳು ಭರ್ತಿಯಾಗದೇ ಉಳಿದಲ್ಲಿ ಅಥವಾ ಮೀಸಲು ಪ್ರವರ್ಗದ ವಿದ್ಯಾರ್ಥಿಗಳು ತಮ್ಮ ಸೀಟುಗಳ ಆಯ್ಕೆ ಮಾಡಿಕೊಂಡ ನಂತರ ಬಿಟ್ಟುಹೋಗಿದ್ದಲ್ಲಿ, ಆ ಸೀಟುಗಳಿಗೆ,ರಾಜ್ಯದ ಸಾಮಾನ್ಯ ಪ್ರವೇಶ ಪರೀಕ್ಷಾ ಸಮಿತಿಯು ನಡೆಸಿದ ಸಾಮಾನ್ಯ ಪ್ರವೇಶ ಪರೀಕ್ಷೆಯ ಅರ್ಹತಾಪಟ್ಟಿಯಿಂದ ಅದೇ ಪ್ರವರ್ಗಕ್ಕೆ ಸೇರಿದ ವಿದ್ಯಾರ್ಥಿಗಳನ್ನು ಭರ್ತಿ ಮಾಡಿಕೊಳ್ಳತಕ್ಕದ್ದು: ಮತ್ತು

ಪರಂತು, ತದನಂತರವೂ ಸೀಟುಗಳು ಭರ್ತಿಯಾಗದೇ ಉಳಿದಲ್ಲಿ, ಅಂಥ ಉಳಿದ ಸೀಟುಗಳನ್ನು, ಖಾಸಗಿ ಅನುದಾನಿತವಲ್ಲದ ವೃತ್ತಿಶಿಕ್ಷಣ ಸಂಸ್ಥೆಗಳ ಸಂಘವು ನಡೆಸಿದ ಸಾಮಾನ್ಯ ಪ್ರವೇಶ ಪರೀಕ್ಷೆಯ ಮೂಲಕ ಮೆರಿಟ್ ಆಧಾರದ ಮೇಲೆ ಸಾಮಾನ್ಯ ಪ್ರವರ್ಗಕ್ಕೆ ಸೇರಿದ ವಿದ್ಯಾರ್ಥಿಗಳಿಂದ ಭರ್ತಿ ಮಾಡಿಕೊಳ್ಳತಕ್ಕದ್ದು.

Xxx xxx xxx

(iii) (ಎ) ಅನುದಾನಿತವಲ್ಲದ ಅಲ್ಪಸಂಖ್ಯಾತ ವೃತ್ತಿಶಿಕ್ಷಣ ಸಂಸ್ಥೆಗಳಲ್ಲಿ, ಶೇಕಡಾ ಅರವತ್ತಾರಕ್ಕೆ ಕಡಿಮೆ ಇಲ್ಲದ ಸೀಟುಗಳನ್ನು, ಖಾಸಗಿ ವೃತ್ತಿಶಿಕ್ಷಣ ಸಂಸ್ಥೆಗಳ ಸಂಘವು ನಡೆಸಿದ ಸಾಮಾನ್ಯ ಪ್ರವೇಶ ಪರೀಕ್ಷೆಯ ಮೆರಿಟ್ ಪಟ್ಟಿಯಲ್ಲಿ ಪರಸ್ಪರ ಅರ್ಹತೆಯ ಆಧಾರದ ಮೇಲೆ, ಆ ಸಂಸ್ಥೆಯು ಯಾವ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದೆಯೋ ಆ ರಾಜ್ಯದೊಳಗಿನ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದ ವಿದ್ಯಾರ್ಥಿಗಳಿಂದ ಭರ್ತಿಮಾಡಿಕೊಳ್ಳತಕ್ಕದ್ದು; ಮತ್ತು

(ಬಿ) ಉಳಿದ ಸೀಟುಗಳು ಸಾಮಾನ್ಯ ಪ್ರವರ್ಗಕ್ಕೆ ಸೇರಿದವುಗಳಾಗಿರುತ್ತವೆ. ಸಾಮಾನ್ಯ ಪ್ರವರ್ಗದ ಸೀಟುಗಳ ಪೈಕಿ ಶೇಕಡಾ ಹದಿನೈದರ ವರೆಗೆ ಅನಿವಾಸಿ ಭಾರತೀಯರ ಕೋಟಾಕ್ಕೆ ಸೇರಿದ ವಿದ್ಯಾರ್ಥಿಗಳನ್ನು ಭರ್ತಿಮಾಡಿಕೊಳ್ಳಬಹುದು:

ಪರಂತು, ಅನುದಾನಿತವಲ್ಲದ ಸಂಸ್ಥೆಗಳಲ್ಲಿ ಅಲ್ಪಸಂಖ್ಯಾತ ಪ್ರವರ್ಗಕ್ಕಾಗಿ ಮೀಸಲಿಟ್ಟ ಯಾವುದೇ ಸೀಟುಗಳು ಭರ್ತಿಯಾಗದೇ ಉಳಿದಿದ್ದಲ್ಲಿ ಅಥವಾ ಸೀಟುಗಳನ್ನು ಆಯ್ಕೆ ಮಾಡಿಕೊಂಡ ನಂತರ ವಿದ್ಯಾರ್ಥಿಗಳು ಬಿಟ್ಟುಹೋದಲ್ಲಿ, ಅವುಗಳಿಗೆ ರಾಜ್ಯಸಾಮಾನ್ಯ ಪ್ರವೇಶ ಪರೀಕ್ಷಾ ಸಮಿತಿಯು ನಡೆಸಿದ ಸಾಮಾನ್ಯ ಪ್ರವೇಶ ಪರೀಕ್ಷೆಯ ಮೆರಿಟ್ ಪಟ್ಟಿಯಿಂದ ಅವೇ ಪ್ರವರ್ಗದ ಅಲ್ಪ ಸಂಖ್ಯಾತ ವಿದ್ಯಾರ್ಥಿಗಳನ್ನು ಭರ್ತಿಮಾಡಿಕೊಳ್ಳತಕ್ಕದ್ದು:

ಮತ್ತು ಪರಂತು, ಅದಾದ ನಂತರವೂ ಅಂಥ ಸೀಟುಗಳು ಭರ್ತಿಯಾಗದೇ ಉಳಿದಲ್ಲಿ ಅವುಗಳನ್ನು, ಖಾಸಗಿ ಅನುದಾನಿತವಲ್ಲದ ವೃತ್ತಿ ಶಿಕ್ಷಣ ಸಂಸ್ಥೆಗಳ ಸಂಘವು ನಡೆಸಿದ ಸಾಮಾನ್ಯ ಪ್ರವೇಶ ಪರೀಕ್ಷೆ ಮೂಲಕ ಮೆರಿಟ್ ಆಧಾರದ ಮೇಲೆ ಸಾಮಾನ್ಯ ಪ್ರವರ್ಗಕ್ಕೆ ಸೇರಿದ ವಿದ್ಯಾರ್ಥಿಗಳಿಂದ ಭರ್ತಿಮಾಡಿಕೊಳ್ಳತಕ್ಕದ್ದು.

Xxx xxx xxx

(iv) ಅನಿವಾಸಿ ಭಾರತೀಯ ವಿದ್ಯಾರ್ಥಿಗಳಿಂದ ಭರ್ತಿಯಾಗಿರಬಹುದಾದ ಸೀಟುಗಳನ್ನು ಬಿಟ್ಟು ಮೀಸಲು ಅಥವಾ ಸಾಮಾನ್ಯ ಪ್ರವರ್ಗದ ಸೀಟುಗಳೂ ಸೇರಿದಂತೆ, ಖಾಸಗಿ ಅನುದಾನಿತವಲ್ಲದ ವೃತ್ತಿಶಿಕ್ಷಣ ಸಂಸ್ಥೆಗಳಲ್ಲಿನ ಎಲ್ಲಾ ಸೀಟುಗಳಿಗೆ ಪ್ರವೇಶವನ್ನು, ಪ್ರವೇಶ ಮೇಲ್ವಿಚಾರಣಾ ಸಮಿತಿಯು ನಿರ್ದಿಷ್ಟಪಡಿಸಬಹುದಾದಂಥ ರೀತಿಯಲ್ಲಿ ನಡೆಸಲಾಗುವ ಸಾಮಾನ್ಯ ಪ್ರವೇಶ ಪರೀಕ್ಷೆಯ ತರುವಾಯ ಕೇಂದ್ರೀಯ ಕೌನ್ಸಿಲಿಂಗ್ ವಿಧಾನ ಅನುಸರಿಸಿ ಮೆರಿಟ್ ಆಧಾರದ ಮೇಲೆ ನೀಡತಕ್ಕದ್ದು.

Xxx xxx xxx

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು, ಪಿ7, ಕಾಸೂ , 1168–ಪ್ರತಿಗಳು 1000, 22ನೇ ಮಾರ್ಚ್, 2017

KARNATAKA LEGISLATIVE ASSEMBLY
FOURTEENTH LEGISLATIVE ASSEMBLY
THIRTEENTH SESSION
(Adjourned Meetings)

# THE KARNATAKA PROFESSIONAL EDUCATIONAL INSTITUTIONS (REGULATION OF ADMISSION AND DETERMINATION OF FEE) (AMENDMENT) BILL, 2017

**(L.A. Bill No. 14 of 2017)**

A Bill further to amend the Karnataka Professional Educational Institutions (Regulation of Admission and Determination of Fee) Act, 2006.

Whereas, it is expedient further to amend the Karnataka Professional Educational Institutions (Regulation of Admission and Determination of Fee) Act, 2006 (Karnataka Act 8 of 2006) for the purposes hereinafter appearing;

Be it enacted by the Karnataka State Legislature in the sixty-eighth year of the Republic of India, as follows:-

**1. Short title and commencement.-** (1) This Act may be called the Karnataka Professional Educational Institutions (Regulation of Admission and Determination of Fee) (Amendment) Act, 2017.

(2) Section 1 and 5 shall come into force at once and remaining provisions shall come into force on such date as the State Government may, by notification, in the official Gazette, appoint.

**2. Amendment of section 2.-** In the Karnataka Professional Educational Institutions (Regulation of Admission and Determination of Fee) Act, 2006 (Karnataka Act 8 of 2006) (hereinafter referred to as the principal Act), in section 2,-

(a) after clause (f), the following proviso shall be inserted, namely:-

"Provided that, in case Government of India or its agency conducts Common Entrance Test for any course the merit determined in such test shall be considered for making admission to such course."

(b) in clause (jj),-

(i) the words "conducted by association of non- minority or minority Private unaided Professional Education Institutions", shall be omitted; and

(ii) after clause (jj), as so amended the following shall be inserted, namely:-

"Provided that in case the Government of India or its agency conducts such Common Entrance Test then Centralized Counseling shall be conducted by such agency and in such manner as may be prescribed."

(c) in clause (n),the words "and includes persons of Indian origin and overseas citizen of India", shall be inserted at the end.

(d) in clause (q), for the words "affiliated to an university" the words " affiliated to an university and includes private universities of the State" shall be substituted.

(e) for clause (s), the following shall be substituted, namely:-

"(s) "Reserved seats" means the seats reserved in Government colleges, constituent colleges of Universities, private aided and unaided professional educational institutions, private universities in favour of persons belonging to the Scheduled Castes, the Scheduled Tribes and Other Backward Classes or Karnataka Students as may be notified by the State Government;"

**3. Amendment of section 3.-** In section 3 of the principal Act,-

(a) in sub-section (1), in the proviso, after the words "Private Unaided Professional Educational Institutions", occurring in two places the words "and Deemed University Institutions" shall be inserted;

(b) in sub-section(2),-

(i) for the words "Government Seats", the words "all seats" shall be substituted; and

(ii) after sub-section (2), the following proviso shall be inserted, namely:-

"Provided that in respect of any Professional Courses where Government of India or any of its agency conducts Common Entrance Test then Centralized Counseling shall be conducted by such agency as may be notified by the State Government for admission to all Government seats or seats in private unaided Professional Educational Institutions and for Professional Courses in deemed University on the basis of merit secured by the candidates in the Common Entrance Test."

(c) in sub-section(6),-

(i) the word "Government" shall be omitted; and

(ii) after sub-section(6), the following proviso shall be inserted, namely.-

"Provided that where Government of India or any of its agency conducts Common Entrance Test to any Course then the State Common Entrance Test Committee need not conduct Common Entrance Test but Centralized Counseling for all admission to Professional Courses in Government or Private unaided and deemed University Institutions shall be conducted by such agency and in such manner as may be prescribed."

**4. Substitution of section 4.-** For section 4 of the principal Act, the following shall be substituted, namely:-

"**4. Method of Admission in Unaided Professional Educational Institutions.-** All seats in unaided professional educational institutions whether minority or non-minority imparting professional education in any discipline shall make admission through Common Entrance Test conducted by the State Common Entrance Test Committee:

Provided that in case Government of India or its agency conducts Common Entrance Test for any Professional Course then for such Courses, Centralized Counseling for admission shall be conducted by such agency and in such manner as may be prescribed."

**5. Amendment of section 4A.-** In section 4A of the Principal Act, in sub-section (1),-

(i) in clause (D),-

(a) in sub-clause (ii) for the words "sixty percent" the words "fifty five percent" shall be substituted; and

(b) in sub-clause (iii) for the words "twenty percent" the words "twenty five percent" shall be substituted.

(ii) after the proviso, the following proviso shall be inserted, namely:-

"Provided further that, in case the Government of India or its agency conducts common entrance test to any course of professional education the centralised counselling for allotment of seats shall be conducted by such agency as may be prescribed.

Provided also that, not less than thirty percent of the institutional seats shall be filled by Karnataka Students and if sufficient number of Karnataka students are not available such seats may be filled by others."

**6. Amendment of sections 4B.-** In section 4B of the principal Act,-

(a) after sub-section (2) the following proviso shall be inserted, namely:-

"Provided that, in case Government of India or its agency conducts Common Entrance Test for any of the Professional Educational Courses then for such Professional Educational Courses, the Deemed Universities shall make admission on the ranking secured in that Test but the Centralized Counselling shall be conducted by such agency and in such manner as may be prescribed for admission in such Deemed University Institutions."

(b) after sub-section (3), the following proviso shall be inserted, namely:-

"Provided further that, in case the Government of India or its agency conducts common entrance test to any course of professional education the centralised counselling for allotment of seats shall be conducted by such agency as may be prescribed on the basis of merit

drawn from common entrance test. In case deemed universities fail to constitute association of deemed Universities counselling shall be done by such agency and in such manner as may be prescribed."

**7. Amendment of section 5.-** In section 5 of the principal Act, in sub-section (7), for the words "shall specify the standard and procedure" the words "shall enforce the standards and procedures as may be prescribed by State Government" shall be substituted.

**8. Amendment of section 9.-** In section 9 of the Principal Act,-

(a) in clause (ii),-

(i) in sub-clause (b), after the words "belonging to the Non – Resident Indian Quota" the words "and fifty percent of the remaining seats shall be filled by the Karnataka students" shall be inserted;

(ii) in the first proviso for the words "State Common Entrance Test Committee" the words "State Common Entrance Test Committee or Common Entrance Test conducted by the Government of India or its agency as the case may be" shall be substituted; and

(iii) in the second proviso the words "conducted by Association of unaided Private Professional Educational Institutions" shall be omitted.

(b) in clause (iii),-

(i) in sub-clause (a), the words "of the association of Private Professional educational institutions" shall be omitted.

(ii) in sub-clause (b), after the words "belonging to the Non – Resident Indian Quota" the words "and fifty percent of the remaining seats shall be filled by the Karnataka students" shall be inserted;

(iii) in first proviso, the words "or the Government of India or its agency as the case may be" shall be inserted at the end; and

(iv) in the second proviso, the words "conducted by the association of Unaided Private Professional Educational Institutions" shall be omitted.

(c) in clause (iv), for the words "specified by admission Overseeing Committee", the words "as may be prescribed" shall be substituted.

**STATEMENT OF OBJECTS AND REASONS**

It is considered necessary to amend the Karnataka Professional Education (Regulation of Admissions, Determination of fee) Act, 2006, (Karnataka Act 8 of 2006) to provide for,-

(a) conduct of Common Entrance Test by the State Government;
(b) in case the Government of India or its agency conducts Common Entrance Test, ranking of the candidates shall be obtained from such Common Entrance Test;
(c) fill up of seats through Common Entrance Test Committee or Government of India or its agency in deemed Universities also;
(d) if Private Educational Institutions agrees to consensual agreement with the Government then, the conduct of Common Entrance Test shall be in accordance with such agreement;
(e) framing of rules by the State Government for conduct centralised counseling by it or by such agency, in such manner as may be prescribed;
(f) inclusion of private universities in the definition of "Professional Educational Institutions"; and
(g) other consequential amendments also.

Hence the Bill.

**FINANCIAL MEMORANDUM**

There is no extra expenditure involved in the proposed legislative measure.

## MEMORANDUM REGARDING DELEGATED LEGISLATION

| | |
|---|---|
| **Clause 2:** | Proviso to clause (jj) of section 2 proposed to be inserted empowers the State Government to prescribe the agency and the manner of conducting Common Entrance Test. |
| **Clause 3:** | Proviso to sub-section (6) of section 3 proposed to be inserted empowers the State Government to prescribe the agency and the manner of Centralized Counseling for all admission to professional course. |
| **Clause 4:** | Section 4 proposed to be substituted empowers the State Government to prescribe the agency and the manner of Centralized Counseling for admission. |
| **Clause 5:** | Proviso of clause (D) of sub-section (1) of Section 4A proposed to be inserted empowers the State Government to prescribe the agency for allotment of seats by Centralized Counseling for allotment of seats. |
| **Clause 6:** | (i) Proviso to sub-section (2) of section 4B proposed to be inserted empowers the State Government to prescribe the agency and the manner for admission to Deemed University Institutions.<br>(ii) Proviso to sub-section (3) of section 4B proposed to be inserted empowers the State Government to prescribe,-<br>(a) the agency for allotment of seats for Centralized Counseling;<br>(b) the agency and the manner of counseling in case deemed universities incase it fails to constitute association of deemed universities. |
| **Clause 7:** | Sub-section (7) of section 5 empowers the State Government to prescribe by rules the standards and procedures to be followed for admissions. |
| **Clause 8:** | Clause (iv) of section 9 proposed to be substituted empowers the State Government to prescribe the manner of conducting Centralized Counseling. |

The proposed delegation of Legislative power is normal in character.

**BASAVARAJ RAYAREDDI**
Minister for Higher Education

**S. Murthy**
Secretary (I/C)
Karnataka Legislative Assembly

## ANNEXURE

## EXTRACT FROM THE KARNATAKA PROFESSIONAL EDUCATIONAL INSTITUTIONS (REGULATION OF ADMISSION AND DETERMINATION OF FEE) ACT, 2006 (KARNATAKA ACT 8 OF 2006)

**XX XX XX**

**2. Definitions.**- (1) In this Act, unless the context otherwise requires,-

**XX XX XX**

(f) "Common Entrance Test Cell or Committee" means the agency of the State Government constituted under section 3 which conducts the Common Entrance Test.

**XX XX XX**

(jj) "Institutional seats" means the seats other than Government seats filled by Private unaided Professional Educational Institutions through common entrance test conducted by association of non-minority or minority Private unaided Professional Educational Institutions.

**XX XX XX**

(n) "Non-resident Indian" means a candidate born to a parent of Indian origin and residing outside the country and who has passed the qualifying equivalent examination outside India;

**XX XX XX**

(q) "Professional Educational Institution" means college or school or an institute by whatever name called imparting professional education or conducting professional educational courses leading to the award of a degree, diploma or a certificate by whatever name called, approved or recognized by the competent statutory body and affiliated to an university;

**XX XX XX**

(s) "Reserved seats" means the seats reserved in Government colleges, constituent colleges of universities, private aided and unaided professional educational institutions in favour of persons belonging to the Scheduled Castes, the Scheduled Tribes and Other Backward Classes as may be notified by the State Government;

**XX XX XX**

**3. State Common Entrance Test Committee.**- (1) There shall be a State Common Entrance Test Committee consisting of,-

**XX XX XX**

Provided that, in case all private unaided Professional Educational Institutions agree and opt to fill all of their seats except the seats reserved for non-resident Indian students through State Common Entrance Test Cell, then the State Government may, by notification, re-constitute the State Common Entrance Test Committee consisting of such number of members, as it deems fit, including representatives from the management of private unaided Professional Educational institutions imparting education in Medical, Dental, Engineering and other faculties.

(2) The Committee shall conduct a Common Entrance Test for admission of students to the Government seats in professional educational institutions. For the purpose of ensuring this the State Government shall provide such number of officers and officials to the State Common Entrance Test Committee as may be required.

**xx** **xx** **xx**

(6) Admission to every Government seat shall be made on the basis of merit secured in the Common Entrance Test conducted by the State Common Entrance Test Committee followed by centralised counseling subject to the reservation policy of the State.

**4. Method of Admission in unaided professional educational institutions.-** Association of all unaided professional educational institutions whether minority or non-minority imparting professional education in any one discipline shall make admission through Common Entrance Test: Provided that any unaided professional educational institution or deemed university institutions, which would like to make admission for seats other than Government seats through Common Entrance Test Committee, may also exercise their option to join and to make admission through Common Entrance Test Committee in the order of merit and through counseling.

**4A. Method of admission in case of consensual agreement.-** (1) Notwithstanding anything contained in this Act, in case if the State Government and the association of unaided professional educational institutions whether minority or non-minority agree to enter into a consensual arrangement or agreement with regard to sharing of seats and fixation of fee in respect of such seats in said unaided professional educational institutions, in such year, the admission to such number of seats as agreed upon by the State Government and the private professional educational institutions, shall be done by the common entrance test committee as Government seats in accordance with such rules as may be prescribed by the Government regarding selection of candidates for admission to Government seats in Professional Educational institutions and reservation policy of the State including reservation under Article 371J. The remaining seats shall be filled through the Common Entrance Test conducted by the association of private professional educational institutions

or association of religious and linguistic minority institutions on the basis of merit followed by centralised counselling, in a fair, transparent and non-exploitative manner as per the consensual agreement subject to such rules as may be prescribed. Subject to the consensual arrangement or agreement the State Government may, by notification, publish the seat matrix to be filled by the State common entrance test committee and the association of private unaided professional educational institutions in the manner as specified below, namely:-

**XX** **XX** **XX**

(D) Out of the total intake of Post-graduate Medical/Dental seats, in an unaided minority educational institutions, across the pre-clinical, para-clinical and clinical disciplines which shall be by rotation of disciplines every year:-

(i) not less than twenty percent of the seats shall be filled up through Common Entrance Test conducted by State Common Entrance Test Committee;

(ii) not more than sixty percent of the seats shall be filled up by the merit list of Common Entrance Test conducted by the Association of minority unaided Professional Educational Institutions; and

(iii) not more than twenty percent of the seats shall be filled up by Non-Resident Indians/Management quota candidates.

**XX** **XX** **XX**

**4B. Method of Admission in Deemed University Institutions.- XX XX XX**

(2) The deemed university non-minority or minority Institutions, as the case may be, which do not follow UGC guidelines shall fill up such number of seats in their institution through Common Entrance Test Committee and Common Entrance Test conducted by association as may be notified by the State Government.

(3) If Deemed University Institutions follow the UGC Regulations but agrees to consensual agreement with the State Government subject to such consensual agreement the seat sharing formula shall be not less than 25 percent of the total intake both in Undergraduate and Post-graduate Medical Course to be filled up through Common Entrance Test Committee conducted by the State Government at such rate of fee with such concession and scholarship by such Institutions as may be agreed upon in the Consensual Agreement and not more than 25 percent of the total intake to be filled up

by Non-Resident Indians/Management Quota by following merit by the institutions concerned. The remaining 50% shall be the Institutional seats to be filled up through Entrance Examination conducted by the Deemed University Institutions (as currently followed).

**5. Admission Overseeing Committee.- XX XX XX**

(7) The Admission Overseeing Committee shall specify the standards and procedure to be followed by the Association of unaided Private Professional Educational Institutions 1[non-minority or minority as the case may be]1 while conducting the common entrance test and shall oversee and supervise the common entrance test. The Admission Overseeing Committee shall also supervise and oversee the centralised counseling and the admissions made by the Association of unaided Private Professional Educational Institutions 1[non-minority or minority as the case may be]1 in order to ensure that it is conducted in a fair, transparent and non-exploitative manner. For the purpose of ensuring this the State Government shall provide such number of officers and officials to the Admission Overseeing Committee as may be required.

**XX XX XX**

**9. Allocation and reservation of seats.-** Out of the total intake of seats in a professional educational institution,-

**XX XX XX**

(ii) (a) in an unaided non-minority institution fifty percent of the seats shall be reserved for candidates belonging to the Scheduled Castes, the Scheduled Tribes and Other Backward Classes from the State as notified by the State Government; and

(b) the remaining seats shall be general category seats. Out of the general category seats upto fifteen percent may be filled by candidates belonging to the Non-Resident Indian quota:

Provided that where the seats reserved for the Scheduled Castes, Scheduled Tribes and Other Backward Classes in an unaided non minority institution are left unfilled due to non-availability of the candidates, or where students of reserved categories leave after they select the seats, the same shall be filled by the candidates belonging to the same category out of the merit list of the Common Entrance Test conducted by the State Common Entrance Test Committee:

Provided further that if seats are remain unfilled even thereafter, such unfilled seats shall be filled from the student belonging to general merit on the basis of merit through the Common Entrance Test conducted by the association of Unaided Private Professional Educational Institutions.

(iii) (a) In an unaided minority professional educational institution, not less than sixty six percent of the seats shall be filled by minority students

from within the State belonging to the minority community to which the institution belongs on the basis of interse merit in the merit list of the Common Entrance Test of the Association of Private Professional educational institutions; and

(b) the remaining seats shall be the general category seats. Out of the general category seats, upto fifteen percent may be filled by candidates belonging to the Non Resident Indian quota:

Provided that if any seats earmarked for the minority category in unaided institutions remain unfilled or where the students leave after selection of seat the same shall be filled by minority students of the same categories out of the merit list of the Common Entrance Test conducted by the State Common Entrance Test Committee:

Provided further that if seats are remain unfilled even thereafter, such unfilled seats shall be filled from the student belonging to general merit on the basis of merit through the Common Entrance Test conducted by the association of Unaided Private Professional Educational Institutions.

**XX** **XX** **XX**

(iv) Admission to all seats in a private unaided professional educational institutions including reserved or general category seats but excluding the seats which may be filled by Non-resident Indian candidates, shall be made on the basis of merit by following the procedure of Common Entrance test followed by centralized counseling conducted in the manner as specified by the Admission Overseeing Committee.

**XX** **XX** **XX**

Government Press, Vikasa Soudha Unit, Bengaluru 22nd March, 2017 P7, W.D.1168, Copies 1000